**ಪಠ್ಯಪುಸ್ತಕಗಳ ವ್ಯಾಪ್ತಿಯನ್ನು ಹಿಗ್ಗಿಸುವ ಮೂಲಕ ಆಲೋಚನೆಯ ವ್ಯಾಪ್ತಿಯನ್ನು ಹಿಗ್ಗಿಸುವುದು**

**ಸಾಚಿ ಖಂಡಪುರ್**

ಮಾಹಿತಿಯನ್ನು ಒದಗಿಸುವ ಯಾವುದೇ ಆದರೂ ಅದನ್ನು ಪಠ್ಯವೆನ್ನಬಹುದು; ಅದು ಪ್ರಾಥಮಿಕ ಮಾಹಿತಿಯಾಗಿರಬಹುದು ಅಥವಾ ಪರಾಮರ್ಶನೆಯ ಮಾಹಿತಿಯಾಗಿರಬಹುದು, ಒಟ್ಟಿನಲ್ಲಿ ನಿರ್ದಿಷ್ಟ ವಿಷಯಾಧ್ಯಯನಕ್ಕೆ ಆ ಮಾಹಿತಿ ಸಹಾಯ ಮಾಡುವಂತಿರಬೇಕು. ಅಮೆರಿಕದ ನನ್ನ ಕಾಲೇಜಿನ ಮೊದಲ ಕೆಲ ತರಗತಿಗಳಲ್ಲಿ ಇದನ್ನೇ ನನಗೆ ಕಲಿಸಲಾಗಿತ್ತು. ಇದು ನನಗೆ ಗೊಂದಲವನ್ನುಂಟು ಮಾಡಿತ್ತು. ಏಕೆಂದರೆ ಭಾರತದ ನನ್ನ ಇಡೀ ಶಾಲಾದಿನಗಳಲ್ಲಿ ಪಠ್ಯವೆಂದರೆ ಕೇವಲ ಪಠ್ಯಪುಸ್ತಕಗಳು ಎಂದೇ ನಾನು ಕಲಿತದ್ದು. ನಿರ್ದಿಷ್ಟ ಕೋರ್ಸುಗಳಲ್ಲಿ ಪಠ್ಯಪುಸ್ತಕವೊಂದು ಮಾನದಂಡದಂತೆ ಬಳಕೆಯಾಗುತ್ತಿತ್ತು. ಆದರೆ ಕಾಲೇಜಿಗೆ ಬಂದ ಮೇಲೆ ಇಲ್ಲಿ ಹೆಚ್ಚಿನ ತರಗತಿಗಳಲ್ಲಿ ಪಠ್ಯಪುಸ್ತಕ ಬಳಸದೇ ಇರುವುದನ್ನು ನೋಡಿ ನನಗೆ ಆಶ್ಚರ್ಯವಾಗಿತ್ತು. ನನಗೆ ಸಿನೆಮಾಗಳನ್ನು ನೋಡಲು, ಮಾತುಗಳ ಲಿಪ್ಯಂತರಗಳನ್ನು ಓದಲು, ಜೊತೆಗೆ ಕತೆ-ಕಾದಂಬರಿಗಳು ಮತ್ತು ಅಕಾಲ್ಪನಿಕ ವೈಚಾರಿಕ ಬರೆಹಗಳನ್ನು ಅರಗಿಸಿಕೊಳ್ಳಲು ಹೇಳುತ್ತಿದ್ದರು. ಕೋರ್ಸೊಂದನ್ನು ಕಲಿಯುವುದಕ್ಕೆ ಮತ್ತು ಬೋಧಿಸುವುದಕ್ಕೆ ಈ ರೀತಿಯ ಸಾಧನಗಳನ್ನೂ ಸಹ ಬಳಸಿಕೊಳ್ಳಬಹುದು ಎಂಬ ವಿಚಾರವು ನನಗೆ ಅಪರಿಚಿತವಾಗಿತ್ತು.

ಕಲಿಯುವುದು ಎಂದರೆ ಪಠ್ಯಪುಸ್ತಕದಲ್ಲಿ ಇದ್ದದ್ದನ್ನು ಓದುವುದು ಎಂದೇ ನನಗೆ ರೂಢಿಯಾಗಿತ್ತು ಮತ್ತು ನನ್ನ ಉತ್ತರಗಳು ಅದರೊಳಗೆ ಇದ್ದ ವಿಚಾರಗಳಿಗೆ ಹೊಂದಿಕೊಳ್ಳಬೇಕು ಎಂದೇ ನನಗೆ ಕಲಿಸಲಾಗಿತ್ತು. ಇಲ್ಲದಿದ್ದರೆ ನಾನು ಶೈಕ್ಷಣಿಕವಾಗಿ ನೈಪುಣ್ಯತವನ್ನು ಸಾಧಿಸಲಾರೆ ಎಂಬ ಭಾವನೆಯನ್ನು ಅದು ನನ್ನಲ್ಲಿ ಉಂಟುಮಾಡಿತ್ತು. ಪಠ್ಯಪುಸ್ತಕದಲ್ಲಿ ಕೊಟ್ಟ ಮಾಹಿತಿಗಳು ಓಬೀರಾಯನ ಕಾಲದ ಮಾಹಿತಿಗಳಾದರೂ ಅವು ಸರಿಯೇ ಇರುತ್ತವೆ ಎಂದು ಪರಿಗಣಿಸಲಾಗುತ್ತಿತ್ತು. ಉದಾಹರಣೆಗೆ, 12 ನೇ ತರಗತಿಯ ಉದ್ಯಮಶೀಲತೆಯ (entrepreneurship) ಪಠ್ಯಪುಸ್ತಕದಲ್ಲಿ 1956 ರ ಕಂಪೆನಿ ಕಾಯಿದೆಗಳನ್ನು ಕುರಿತು ನಾವು ಕಲಿಯಬೇಕಿತ್ತು. ಈ ಹಳೆಯ ಕಾಯಿದೆಯನ್ನು ಪರಿಷ್ಕರಿಸಿ 2013 ರ ಕಂಪೆನಿ ಕಾಯಿದೆಯನ್ನು ತರಲಾಗಿದೆ ಎನ್ನುವುದನ್ನು ನಮಗೆ ಕಲಿಸಿರಲೇ ಇಲ್ಲ. ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಮತ್ತು ಸಿಂಧುವಾಗುವ ಜ್ಞಾನವನ್ನು ಹರಡುವ ಬದಲು ಪಠ್ಯಪುಸ್ತಕವನ್ನು ಅನುಸರಿಸುವುದೇ ಹೆಚ್ಚು ಮುಖ್ಯ ಎನ್ನುವ ಈ ಧೋರಣೆಯಿಂದಾಗಿ ತರಗತಿಯಲ್ಲಿ ಪಡೆದ ಜ್ಞಾನವು ಅಪ್ರಸ್ತುತವಾಗಿ, ಬದುಕಿನಲ್ಲಿ ಅನ್ವಯಿಸಲು ಅನುಪಯುಕ್ತವಾಗಿ ಪರಿಣಮಿಸುತ್ತಿತ್ತು.

ಶಿಕ್ಷಣದ ಮೊದಮೊದಲಿನ ಹಂತಗಳಿಗೆ ಪಠ್ಯಪುಸ್ತಕಗಳು ಬಹಳ ಮುಖ್ಯವಾಗುತ್ತವೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಬೋಧನೆಯನ್ನು ಮಾಡಲು ಅವು ಶಿಕ್ಷಕರಿಗೆ ಒಂದು ಚೌಕಟ್ಟನ್ನು ನೀಡುತ್ತವೆ. ವಿದ್ಯಾರ್ಥಿಗಳೂ ಸಹ ತರಗತಿಯಲ್ಲಿ ಕಲಿಸಿದ್ದನ್ನು ಮುಂದುವರಿಸಿಕೊಂಡು ಹೋಗಲು

ಸಾಧ್ಯವಾಗುತ್ತದೆ,  ಮತ್ತು ತರಗತಿಯಲ್ಲಿ ಕಲಿತದ್ದನ್ನು ಪುನಃ ಓದಲು ಅಥವಾ ಪಾಠಗಳನ್ನು ಇನ್ನೂ ಸರಿಯಾಗಿ ಕಲಿಯಲು ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಬಹುದು. ಆದರೆ ಪಠ್ಯಪುಸ್ತಕಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ವಿನ್ಯಾಸ ಮಾಡಬೇಕು ಎಂದು ನನಗೆ ಅನಿಸುತ್ತದೆ. ಮೇಲೆ ಹೇಳಿದ ಉದಾಹರಣೆಯನ್ನೇ ತೆಗೆದುಕೊಂಡರೆ, ಹೊಸ ಕಾಯಿದೆ ಜಾರಿಗೆ ಬಂದ ಮೇಲೆ ಪರಿಷ್ಕರಿಸಿ ಪ್ರಕಟಿಸಿದ್ದರೆ ಅದು ಇವತ್ತಿನ ವಾಸ್ತವಗಳಿಗೆ ಪ್ರಸ್ತುತವಾಗುತ್ತಿತ್ತು. ಅದಕ್ಕಾಗಿ ಪಠ್ಯಪುಸ್ತಕಗಳನ್ನು ಸಮಯೋಚಿತವಾಗಿ ಹಳೆಯ ಅಪ್ರಸ್ತುತ ವಿಷಯಗಳನ್ನು ಕೈಬಿಟ್ಟು ನವೀಕರಿಸಿದ  ಮತ್ತು ಹೆಚ್ಚು ಪ್ರಸ್ತುತವಾಗುವ ಮಾಹಿತಿಗಳನ್ನು ಸೇರಿಸಿ ಪರಿಷ್ಕರಿಸುತ್ತ ಇರಬೇಕಾಗುತ್ತದೆ.

ವಿದ್ಯಾರ್ಥಿಗಳು ಅಸ್ಪಷ್ಟ ಮಾಹಿತಿಯನ್ನು ಕುರಿತು ಪರೀಕ್ಷೆ ಬರೆಯುವಂತಿರಬಾರದು ಎಂದು ನನಗೆ ಅನಿಸುತ್ತದೆ. ಉದಾಹರಣೆಗೆ, 12 ನೇ ತರಗತಿಯ ನಮ್ಮ ರಾಜ್ಯಶಾಸ್ತ್ರದ ಪಠ್ಯಪುಸ್ತಕದಲ್ಲಿ 1989 ರಿಂದ ಈಚೆಗೆ ಆಡಳಿತ ನಡೆಸಿದ ಎಲ್ಲ ಒಕ್ಕೂಟ ಸರಕಾರಗಳ ಒಂದು ಫ್ಲೋ ಚಾರ್ಟ್ ಇತ್ತು. ಅದರೊಳಗೆ ಆ ಸರಕಾರಗಳ ಪ್ರಧಾನಮಂತ್ರಿಗಳನ್ನೂ ಸೇರಿಸಲಾಗಿತ್ತು. ಆ ವರ್ಷದ ಬೋರ್ಡ್ ಪರೀಕ್ಷೆಯಲ್ಲಿ ಈ ಫ್ಲೋ ಚಾರ್ಟ್ ಮೇಲೆ ನಾಲ್ಕು ಅಂಕದ ಒಂದು ಪ್ರಶ್ನೆ ಇತ್ತು. ನಾವು ಯಾರಾದರೂ ರಾಜ್ಯಶಾಸ್ತ್ರಜ್ಞರಾಗುವವರಿದ್ದರೆ, ಅಥವಾ ನೀತಿ ನಿರೂಪಕರಾಗುವವರಿದ್ದರೆ ನಿರ್ದಿಷ್ಟ ಸರಕಾರದ/ ಆಡಳಿತ ವ್ಯವಸ್ಥೆಯ ಲಾಭ ಮತ್ತು ಹಾನಿಯ ಮಾಹಿತಿಗಳು ನಮಗೆ ಸಹಾಯ ಮಾಡುವಂತಹ ಮಾಹಿತಿಗಳಾಗುತ್ತಿದ್ದವು, ನಾವು ಹುಟ್ಟುವುದಕ್ಕೂ ಮುಂಚೆ ಪ್ರಧಾನಮಂತ್ರಿ ಯಾರಾಗಿದ್ದರು ಎನ್ನುವುದಲ್ಲ. ನಮ್ಮ ಕಾಲಕ್ಕೆ ಪ್ರಸ್ತುತವಾಗುವ ಅಥವಾ ನಮ್ಮ ಕಾಲದ ವಾಸ್ತವವನ್ನು ಬಿಂಬಿಸುವ ವಿಷಯಗಳನ್ನು ಒಳಗೊಂಡರೆ ಮಾತ್ರ ಪಠ್ಯಪುಸ್ತಕಗಳು ಪ್ರಯೋಜನಕ್ಕೆ ಬರುತ್ತವೆ.

ಅದೇ ಹೊತ್ತಿಗೆ ಪಠ್ಯಪುಸ್ತಕಗಳು ನಮ್ಮ ಕಾಲದ ವಾಸ್ತವವನ್ನು ಬಿಂಬಿಸುವಂತಹ ಏಕೈಕ ಕಲಿಕಾ ಸಾಧನಗಳೇನೂ ಅಲ್ಲ ಎನ್ನುವುದನ್ನು ಗುರುತಿಸಬೇಕು. ಇತರ ಮಾಧ್ಯಮಗಳಾದ ಚಲನಚಿತ್ರ, ಡಾಕ್ಯುಮೆಂಟರಿಗಳು, ಲೇಖನಗಳು, ಭಾಷಣಗಳು, ಮತ್ತು ಸಾಮಾಜಿಕ ಜಾಲತಾಣಗಳನ್ನೂ ಬೋಧನೆಯ ವಿಧಾನಗಳಿಗೆಂದು ಬಳಸಿಕೊಳ್ಳಬಹುದು. ಅನೇಕ ವಿದ್ಯಾರ್ಥಿಗಳು ತಮ್ಮ ಸುತ್ತ ಮುತ್ತ ಮತ್ತು ಜಾಗತಿಕವಾಗಿ ಕೂಡಾ ಏನಾಗುತ್ತಿದೆ ಎಂದು ಅರಿಯಲು ಈ ಆಕರಗಳನ್ನು ತಮ್ಮ ನಿತ್ಯದ ಬದುಕಿನಲ್ಲಿ ಬಳಸುತ್ತಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ತಾವೇ ಸ್ವತಃ ಹುಡುಕಿ ಜ್ಞಾನವನ್ನು ಪಡೆಯುವಂತಹ ವಿಧಾನಗಳ ಮೂಲಕ ಬೋಧನೆಯನ್ನು ಪಡೆದರೆ ಶಿಕ್ಷಣ ವ್ಯವಸ್ಥೆಯು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗುತ್ತದೆ. ಒಬ್ಬ ಹಾಸ್ಯಗಾರ ಪ್ರಸ್ತುತ ವಿಷಯವೊಂದರ ಮೇಲೆ ಕೊಡುವ ಕಾರ್ಯಕ್ರಮವು ಅದೇ ವಿಷಯದ ಮೇಲೆ ಅಂಕಿಅಂಶಗಳ ಸಹಿತ ವಿವರಣೆ ನಿಡುವ ಪಠ್ಯಪುಸ್ತಕಗಳಷ್ಟೇ ಮುಖ್ಯವಾಗಬಹುದು. ಈ ಮೂಲಕ ಆ ವಿಷಯದ ಮೇಲೆ ವಿದ್ಯಾರ್ಥಿಗಳು ಒಂದು ಬಹುಸಾಂಸ್ಕೃತಿಕ ಮತ್ತು ಬಹು ಆಯಾಮಗಳ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬಹುದು.

ಆದರೆ ಯಾವುದೇ ಒಂದು ಬೋಧನಾ ವಿಧಾನವನ್ನೇ ನೆಚ್ಚಿಕೊಳ್ಳುವುದು ತರವಲ್ಲ. ಪ್ರತಿ ವಿಧಾನಕ್ಕೂ ಅದರದ್ದೇ ಆದ ಲಾಭಗಳು ಮತ್ತು ಹಾನಿಗಳು ಇರುತ್ತವೆ. ಪೂರಕವಾಗಿ ಬೇರೆ ವಿಧಾನಗಳನ್ನು ಬಳಸುವ ಮೂಲಕ ಪ್ರತೀ ವಿಧಾನದ ಹಾನಿಗಳನ್ನು ಕಡಮೆ ಮಾಡಬಹುದು ಅಥವಾ ಹೋಗಲಾಡಿಸಲೂಬಹುದು. ಇದು ವಿದ್ಯಾರ್ಥಿಗಳ ಒತ್ತಡವನ್ನೂ ಕಡಮೆ ಮಾಡುತ್ತದೆ. ಅದು ನಮ್ಮ ದೇಶದೆಲ್ಲೆಡೆ ವ್ಯಾಪಿಸಿರುವ ಒಂದು ಸಮಸ್ಯೆಯಾಗಿದೆ. ಹಲವು ರೂಪದ ಮಾಧ್ಯಮಗಳು ಮತ್ತು ಮುದ್ರಿತ ಸಾಮಗ್ರಿಗಳ ಬಳಕೆಯಿಂದಾಗಿ ವಿದ್ಯಾರ್ಥಿಗಳ ಒತ್ತಡವನ್ನು ಕಡಮೆ ಮಾಡಬಹುದು ಮತ್ತು ಆಗ ಮಾಹಿತಿಯನ್ನು ಅರಗಿಸಿಕೊಳ್ಳುವುದು ಒತ್ತಡಕ್ಕಿಂತ ಹೆಚ್ಚಾಗಿ ಒಂದು ಆನಂದದಾಯಕ ಚಟುವಟಿಕೆಯಾಗಿ ಪರಿಣಮಿಸುತ್ತದೆ.

ಸ್ವಲ್ಪ ಮಟ್ಟಿಗೆ ಸಿಲೆಬಸ್ ಅನ್ನು ನಿರ್ಧರಿಸುವ ಸ್ವಾತಂತ್ರ್ಯವು ಶಿಕ್ಷಕರಿಗೂ ಲಭಿಸುವಂತಾಗಬೇಕು. ಸಿಲೆಬಸ್ ಹಾಗೂ ಕೋರ್ಸಿನ ಇಡೀ ಅವಧಿಯಲ್ಲಿ ಮತ್ತೇನಾದರೂ ಬದಲಾವಣೆ ಮಾಡುವ ಹಾಗಿದ್ದರೆ ಅದನ್ನೂ ವಿಷಯತಜ್ಞರು ಮತ್ತು ಶಿಕ್ಷಣತಜ್ಞರನ್ನು ಒಳಗೊಂಡ ಮಂಡಳಿಯೊಂದು ನಿರ್ಧರಿಸುವಂತಾಗಬೇಕು. ಆಗ ಪಠ್ಯಪುಸ್ತಕವನ್ನು ಪ್ರಾದೇಶಿಕ ವಾಸ್ತವಗಳು ಮತ್ತು ವ್ಯತ್ಯಾಸಗಳಿಗೆ ಅನುಗುಣವಾಗಿ ಹೊಂದಿಸಿಕೊಳ್ಳಲು ಅವಕಾಶ ಸಿಗುತ್ತದೆ. ಕೊನೆಗೂ ನಿರ್ದಿಷ್ಟ ಮಾಹಿತಿಯೊಂದರ ಪ್ರಸ್ತುತತೆಯು ಅದು ಬಳಕೆಯಾಗುವ ಪ್ರದೇಶದ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಪಠ್ಯಪುಸ್ತಕದೊಳಗೇ ಅದಕ್ಕೊಂದು ಅವಕಾಶವಿದ್ದರೆ ಅದೂ ಒಳ್ಳೆಯದೇ. 12ನೇ ತರಗತಿಯ ಉದಾಹರಣೆಗೇ ಹೋಗುವುದಾದರೆ ಉದ್ಯಮಶೀಲತೆಯನ್ನು ಕುರಿತ ಪಠ್ಯಪುಸ್ತಕದಲ್ಲಿ ಉದ್ಯಮವೊಂದನ್ನು ಆರಂಭಿಸುವುದರ ಮೇಲಿನ ವಿಭಾಗವು ವಿಶೇಷವಾಗಿ ಮುಂಬೈ ಶಹರವನ್ನು ಕೇಂದ್ರೀಕರಿಸಿ ಅಲ್ಲಿ ಅನುಸರಿಸಬೇಕಾದ ಹಂತಗಳನ್ನು ವಿವರಿಸಿತ್ತು. ದಿಲ್ಲಿಯ ವಿದ್ಯಾರ್ಥಿಯಾಗಿ ನನಗೆ ಆ ಹಂತಗಳು ನಿಜವಾಗಿ ಉಪಯೋಗವಾಗುವಂತಿರಲಿಲ್ಲ. ಆ ಪುಸ್ತಕದಲ್ಲಿ ದೇಶದ ಎಲ್ಲ ಮಹಾನಗರಗಳಲ್ಲಿ ಅನುಸರಿಸಬೇಕಾದ ಹಂತಗಳನ್ನು (ಪ್ರಕ್ರಿಯೆಗಳನ್ನು) ಕೊಡಬೇಕಿತ್ತು. ಆಗ ಪ್ರತಿ ವಿದ್ಯಾರ್ಥಿಯೂ ತನ್ನ ಸ್ಥಳೀಯ ಸಂದರ್ಭಕ್ಕನುಗುಣವಾಗಿ ಹಂತಗಳ ಅಧ್ಯಯನ ಮಾಡಬಹುದಿತ್ತು, ಅಥವಾ ತನಗೆ ಪ್ರಸ್ತುತವಾಗದ ಅಂಶಗಳನ್ನು ಸಂಪೂರ್ಣ ಕೈಬಿಡಬಹುದಿತ್ತು. ನಮ್ಮ ನೇರ ಬದುಕು ಅಥವಾ ಭವಿಷ್ಯಕ್ಕೆ ಫಲಕಾರಿಯಾಗದ ಕೆಲಸದ ಭಾರವನ್ನು ಹೊರುವುದು ಅರ್ಥವಿಲ್ಲದ್ದು.

ನಾನು ತರಗತಿಗೆ ನಿರ್ದಿಷ್ಟಪಡಿಸಿದ ಪಠ್ಯಪುಸ್ತಕಗಳನ್ನಷ್ಟೇ ಅಧ್ಯಯನ ಮಾಡುವ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿತೆ. ಈ ವ್ಯವಸ್ಥೆಯಿಂದಾದ ಅನುಕೂಲವೆಂದರೆ, ನಾನು ಮತ್ತು ನನ್ನ ಸಹಪಾಠಿಗಳು ನಿಶ್ಚಿಂತೆಯಿಂದ ಇರುವಂತಾಗಿದ್ದು. ಏಕೆಂದರೆ ಪರೀಕ್ಷೆಯಲ್ಲಿ ಪ್ರತೀ ಪ್ರಶ್ನೆಯೂ ಪಠ್ಯಪುಸ್ತಕವನ್ನು ಆಧರಿಸಿರುತ್ತದೆ ಎಂಬುದು ನಮಗೆ ಚೆನ್ನಾಗಿ ಗೊತ್ತಿತ್ತು. ಆದರೆ ನಾವು ಏನನ್ನು ಕಂಠಪಾಠ ಮಾಡುತ್ತಿದ್ದೇವೆಯೋ ಅದನ್ನು ನಿಜವಾಗಿಯೂ ಅರ್ಥ ಮಾಡಿಕೊಳ್ಳುವ ಅಥವಾ ಅರಿಯುವ ಪ್ರಯತ್ನವನ್ನು ನಾವು ಮಾಡುತ್ತಲೇ ಇರಲಿಲ್ಲ, ಅದು ಆ ವ್ಯವಸ್ಥೆಯಿಂದಾಗುವ

ಹಾನಿಯಾಗಿದೆ. ನಾವು ವಿಮರ್ಶಾತ್ಮಕ ಆಲೋಚನೆಯಲ್ಲಿ ತೊಡಗಬೇಕಾಗಿಲ್ಲ ಎಂದು ನಮಗೆ ಗೊತ್ತಾಗಿತ್ತು. ಆ ವ್ಯವಸ್ಥೆಯು ನನ್ನ ಕಾಲೇಜಿನ ವ್ಯವಸ್ಥೆಗೆ ವಿರುದ್ಧವಾಗಿತ್ತು: ಕಾಲೇಜಿನಲ್ಲಿ ಕಂಠಪಾಠಕ್ಕೆ ಅತೀ ಕಡಮೆ ಅಥವಾ ಅವಕಾಶವೇ ಇರಲಿಲ್ಲ ಎಂದರೂ ತಪ್ಪಾಗಲಾರದು. ಎಲ್ಲವನ್ನೂ ಓದಿ. ವೀಕ್ಷಿಸಿ, ಆಲಿಸಿ ಕಲಿಯಬೇಕಿತ್ತು, ವಿಮರ್ಶಾತ್ಮಕವಾಗಿ ಯೋಚಿಸಿ ವಿಶ್ಲೇಷಿಸಬೇಕಿತ್ತು. ಈ ವ್ಯವಸ್ಥೆಯು ನಮಗೆ ಸ್ವಂತ ಯೋಚಿಸುವ ಸ್ವಾತಂತ್ರ್ಯವನ್ನು ಒದಗಿಸುತ್ತದೆ, ತರಗತಿಯ ಚರ್ಚೆಗಳಲ್ಲಿ ವೈವಿಧ್ಯಮಯ ದೃಷ್ಟಿಕೋನಗಳನ್ನು ಮುಂದಿಡುತ್ತದೆ, ಮತ್ತು ಪ್ರತಿಯೊಬ್ಬರ ಆಲೋಚನೆಯ ವ್ಯಾಪ್ತಿಯನ್ನು ಹಿಗ್ಗಿಸುತ್ತದೆ, ಅದರಲ್ಲೂ ಮುಖ್ಯವಾಗಿ ಉಪನ್ಯಾಸಕರ ಆಲೋಚನೆಯ ದಿಗಂತವನ್ನು ವಿಸ್ತರಿಸುತ್ತದೆ.

ಸಾಚಿಯವರು ಮಸಾಚ್ಯುಸೆಟ್ಸ್ ನ ಪೈಯನಿಯರ್ ವ್ಯಾಲಿ ಮೌಂಟ್ ಹೋಲ್ಯೋಕೆ ಕಾಲೇಜಿನಲ್ಲಿ ಬಿ.ಎ ಪದವಿ ಕೋರ್ಸಿನ ಮೊದಲನೆಯ ವರ್ಷದ ವಿದ್ಯಾರ್ಥಿಯಾಗಿದ್ದಾರೆ. ಅವರು ದೆಹಲಿ ಪಬ್ಲಿಕ್ ಶಾಲೆಯಿಂದ 2018ರಲ್ಲಿ ಉತ್ತೀರ್ಣರಾದರು. ಅವರನ್ನು ಸಂಪರ್ಕಿಸುವುದಿದ್ದರೆ: khand22s@mtholyoke.edu